# <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>

**O.S.231/2017** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಜಿ ಕೆ ಡಿ ವಕೀಲರಿಂದಃ**

ನನ್ನ ತಂದೆ ಬಸಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಒಂದನೇ ಹೆಂಡತಿಯ ಹೆಸರು ಪುಟ್ಟಮ ಎಂದರೆ ಸರಿ. ಎರಡನೇ ಹೆಂಡತಿಯ ಹೆಸರು ಪಾರ್ವತವ್ವ ಎಂದರೆ ಸರಿ. ಪಟ್ಟಮ್ಮ ನಿಗೆ ವಾದಿ ಚಂಪವ್ವ ಒಬ್ಬಳೇ ಮಗಳು ಎಂದರೆ ಸರಿ. ನಾವೆಲ್ಲಾ ಪ್ರತಿವಾದಿಯರು ಪಾರ್ವತವ್ವನ ಮಕ್ಕಳು ಎಂದರೆ ಸರಿ. ನನ್ನ ತಂದೆ ಬಸಪ್ಪ ಪಾರ್ವತವ್ವ ನವರನ್ನು ಮದುವೆಯಾದ ನಂತರ ಪುಟ್ಟವ್ವನನ್ನು ಮದುವೆಯಾಗಿರುತ್ತಾರೆ. ಪಾರ್ವತವ್ವನನ್ನು ಮದುವೆಯಾದ ನಂತರ ಪುಟ್ಟವ್ವನನ್ನು ಮದುವೆಯಾಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪುಟ್ಟವ್ವನವರು 1984 ರ ನಂತರ ಮರಣಹೊಂದಿರುತ್ತಾರೆ. ನನ್ನ ತಂದೆಯವರು 1984 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ

ತಂದೆ ಮರಣ ಹೊಂದಿದ ನಂತರ ನಿಪಿ.1 ರಂತೆ ಡಉತಾರ ಆಗಿದೆ ಎಂದರೆ ಗೊತ್ತಿಲ್ಲ. ವರದಿ ಆಧಾರದ ಮೇಲೆ ನಿಪಿ-1 ರಲ್ಲಿ ಹೆಣ್ಣುಮಕ್ಕಳ ಹೆಸರು ಕಡಿತ ಆಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ವಾದಿ ಚಂಪಾವತಿಯ ಹೆಸರು ಕಡಿಮೆ ಆಗಿಲ್ಲ ಅಂದರೆ ಸರಿಯಲ್ಲ. ಕಂದಾಯ ಅಧಕಾರಿಗಳ ಜೊತೆ ಶಾಮಿಲಾಗಿ ವಾದಿಯ ಹೆಸರು ದಾಖಲಾಗದ ಹಾಗೆ ನೋಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಗೊತ್ತಿಲ್ಲದ ಹಾಗೆ ನಿಪಿ-2 ಖೊಟ್ಟಿ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1994 ರಲ್ಲಿ ವಾಟ್ನಿ ಅಗಿದೆ ಎಂದು ಹೇಳುತ್ತಾರೆ. ವಾದಿ ಚಂಪವ್ವ ಹಾಗೂ ನಮ್ಮ ನಡುವೆ ನೊಂದಾದ ಪಾಲು ವಾಟ್ನಿ ಆಗಿಲ್ಲ. ನಿಪಿ-2 ಖೊಟ್ಟಿ ದಾಖಲೆಯಾಗಿದ್ದು ಆ ಪ್ರಕಾರ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ಆದ ಖರೀದಿ ಪತ್ರ ಖೊಟ್ಟಿ ದಾಖಲೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ನನ್ನ ಹೆಸರಿದೆ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ನನ್ನ ಸಹಿ ಇಲ್ಲ. ವಾದಿಗೆ ಗೊತ್ತಿಲ್ಲದ ಹಾಗೆ ನಾವೆಲ್ಲಾ ಅಣ್ಣತಮ್ಮಂದಿರು ಸೇರಿ ಖೊಟ್ಟಿ ಖರೀದಿ ಪತ್ರ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಒಂದನೇ ಮೂರ ಅಂಶ ಪೈಕಿ ಎಂದು ಬರೆಂನುಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ಸರ್ವೆ ನಂ. 72/2 ರಲ್ಲಿ ಒಂದನೇ ಮೂರು ಅಂಶ ಹಿಸ್ಸಾ ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಒಂದು ವೇಳೆ ಅಣ್ಣತಮ್ಮಂದಿರ ನಡುವೆ

ಪಾಲು ವಿಭಾಗ ಆಗಿದ್ದರೆ ಒಂದನೇ ಮೂರು ಅಂಶ ಪೈಕಿ ಎಂದು ಬರೆಯುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ನಿಪಿ-4 ರಲ್ಲಿ ಖರೀದಿ ಕೊಟ್ಟವರ ಪೈಕಿ ನನ್ನ ಹೆಸರು ಇದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಮಲ್ಲನಗೌಡ ಈಶ್ವರಗೌಡ ಚಿಕ್ಕೇನಗೌಡರಿಗೆ ಖರೀದಿ ಪತ್ರ ಮಾಡಿ ಕೊಟ್ಟಿಲ್ಲ. ನಿಪಿ-5 ರಲ್ಲಿ ನಾನು ಸಹ ಖರೀದಿ ಕೊಟ್ಟಿದ್ದೇನೆ ಎಂದು ಉಲ್ಲೇಖ ಇದೆ ನನಗೆ ಗೊತ್ತಿಲ್ಲ. 9 ಎಕರೆ 2 ಗುಂಟೆ ಪೈಕಿ ಒಂದು ಮೂರು ಅಂಶ ಹಿಸ್ಸಾ ಇದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ಸಾಮೂಹಿಕ ಇರುವುದರಿಂದ ಒಂದು ಮೂರು ಅಂಶ ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಎರಡು ಸರ್ವೆ ನಂಬರಿದ್ದವು . ಈಗ ಜಮೀನು ಮಾರಾಟ ಮಾಡಿ ನಾಲ್ಕು ಎಕರೆ ಉಳಿದಿದೆ. ವಾದಿಯ ಗಮನಕ್ಕಿಲ್ಲದೆ ಮಾರಾಟ ಮಾಡಿದ್ದೇವೆ ಎಂದರೆ ಅವರ ಹಕ್ಕಿಲ್ಲ ಎಂದು ಹೇಳುತ್ತಾರೆ. ಗಂಡು ಸಂತಾನಕ್ಕೆ ಮಾತ್ರ ಹಕ್ಕಿದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಬರೆದುಕೊಟ್ಟ ಖರೀದಿ ಪತ್ರ ವಾದಿಗೆ ಬಂಧನ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಬಸಪ್ಪನಿಗೆ ಪಾರ್ಶ್ವ ವಾಯು ಇತ್ತು ಎಂದರೆ ಸರಿ . ಅವರು ಸಾಯುವ ಒಂದು ವರ್ಷ ಮೊದಲು ಪಾರ್ಶ್ವ ವಾಯು ಆಗಿತ್ತು. ಪಾರ್ಶ್ವ ವಾಯು ಆಗಿದ್ದರಿಂದ ಅವರ ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-9 ಮೃತ್ಯು ಪತ್ರ ವನ್ನು ನಾನು ಓದಿರುತ್ತೇನೆ. ಮೃತ್ಯು ಪತ್ರ ಆಗುವಾಗ ನಾನು ಹಾಜರಿದ್ದೆನು. ಎಲ್ಲ ಮಕ್ಕಳಿದ್ದರು. ವಾದಿ ಬೆಂಗಳೂರಿಗೆ ಓಡಿಹೋಗಿದ್ದರು. ಬಸಪ್ಪ ಅವರು ಮಾನಸಿಕವಾಗಿ ಚೆನ್ನಾಗಿದ್ದರು ಎಂದು ವೈದ್ಯರಿಂದ ಪ್ರಮಾಣ ಪತ್ರ ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮಾನಸಿಕವಾಗಿ ಹಾಗೂ ದೈಹಿಕವಾಗಿ

ಸ್ವಾಸ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆಕಾರಣದಿಂದ ವೈದ್ಯರಿಂದ ಪ್ರಮಾಣ ಪತ್ರ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ಮನೆಯಲ್ಲಿ ಹಿರಿಯರ ಸಮಕ್ಷಮ ಬರೆದಿರುತ್ತಾರೆ.

ನಿಡಿ-9 ಮೃತ್ಯು ಪತ್ರವನ್ನು ಗಲಗಲಿಯರ ಮನೆಯಲ್ಲಿ ಹಿರಿಯರ ಸಮಕ್ಷಮ ಬರೆದಿರುತ್ತಾರೆ. ಮೃತ್ಯು ಪತ್ರವನ್ನು ಬರೆದ ನಂತರ ಯಾರು ಇಟ್ಟುಕೊಂಡಿದ್ದರೆಂದು ಗೊತ್ತಿಲ್ಲ. ಮೃತ್ಯು ಪತ್ರ ಆಧಾರದ ಮೇಲೆ ನಮ್ಮ ಹೆಸರು ದಾಖಲು ಮಾಡಿ ಎಂದು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದಿರಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿ 1984 ರಲ್ಲಿ ಕೊಟ್ಟಿದ್ದೆವು ಎಂದು ಹೇಳುತ್ತಾರೆ. ನನ್ನ ತಂದೆ ದಿನಾಂಕ 24.03.1984 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಮರಣ ಹೊಂದಿದ ನಂತರ ಮೃತ್ಯು ಪತ್ರದ ಆಧಾರದ ಮೇಲೆ ಹೆಸರು ದಾಖಲು ಮಾಡಲು ಅರ್ಜಿ ಕೊಡಲು ತೊಂದರೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಮೃತ್ಯು ಪತ್ರ ಖೊಟ್ಟಿ ಇರುವುದರಿಂದ ನಾವು ಅದನ್ನು ಜಾರಿಗೆ ತರಲು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರ ದ ಆಧಾರದ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿಲ್ಲ. ಮುಖ್ಯ ವಿಚಾರಣೆ ಮತ್ತು ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಗಲಗಲಿಯವರ ಮನೆಯಲ್ಲಿ ಹಿರಿಯರ ಸಮಕ್ಷಮ ಮೃತ್ಯು ಪತ್ರ ಬರೆದಿರುತ್ತಾರೆ ಎಂದು ಹೇಳಿದ್ದು ನೆನಪಿಲ್ಲ. ನಮ್ಮ ತಂದೆ ಮೃತ್ಯು ಪತ್ರವನ್ನು ಸ್ವ ಇಚ್ಛೆಯಿಂದ ಗಲಗಲಿಯವರ ಮನೆಯಲ್ಲಿ ಬರೆದಿರುತ್ತಾರೆ. ನಿಪಿ-1 ಮತ್ತು 2 1987 ರಲ್ಲಿ ನಮೂದಾಗಿದ್ದು ಮೃತ್ಯು ಪತ್ರ 1983 ರಲ್ಲಿ ಆಗಿದ್ದು ಒಂದು ವೇಳೆ ಮೃತ್ಯು ಪತ್ರ ನಿಜವಾದು ಆಗಿದ್ದಲ್ಲಿ ಅದರ ಆಧಾರದ ಮೇಲೆ ಹೆಸರು ದಾಖಲು ಮಾಡಿಕೊಳ್ಳುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಿಡಿ-9 ಮೂಲ ಮೃತ್ಯು ಪತ್ರ ಎಲ್ಲಿದೆ ಎಂದು ಗೊತ್ತಿಲ್ಲ. ಮುಖ್ಯ ವಿಚಾರಣೆ ಮತ್ತು ಪ್ರತಿವಾದ ಪತ್ರದಲ್ಲಿ ಮೃತ್ಯು ಪತ್ರ ಕಳೆದಿದೆ ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಮೂಲ ಮೃತ್ಯು ಪತ್ರ ಕಳೆದಿದೆ ಎಂದು ಮುಖ್ಯ ವಿಚಾರಣೆ ಮತ್ತು ಪ್ರತಿವಾದ ಪತ್ರದಲ್ಲಿ ಸುಳ್ಳು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಮೃತ್ಯು ಪತ್ರ ಕಳೆದಿದೆ ಎಂದು ಪೊಲೀಸರಿಗೆ ದೂರು ನೀಡಿಲ್ಲ ಮತ್ತು ಪತ್ರಿಕೆ ಪ್ರಕಟಣೆ ಮಾಡಿಲ್ಲ. ನಿಜಾಂಶ ಹೊರಗೆ ಬರುತ್ತದೆ ಎಂದು ಮೂಲ ಮೃತ್ಯು ಪತ್ರ ವನ್ನು ಹಾಜರುಪಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಸಹಿ ಮಾಡುತ್ತಿದ್ದರು. ಪಾರ್ಶ್ವ ವಾಯ ಆದ ನಂತರ ಹೆಬ್ಬೆಟ್ಟಿನ ಗುರುತು ಹಾಕುತಿದ್ದರು. ನಿಡಿ 9 ಮೃತ್ಯು ಪತ್ರ ಆಗಿ 6 ತಿಂಗಳ ಒಳಗಡೆ ನಮ್ಮ ತಂದೆ ಮರಣಹೊಂದಿದರು ಅಂದರೆ ಸರಿ . ನಮ್ಮ ತಂದೆ ಯಾವುದೇ ಮೃತ್ಯು ಪತ್ರವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಿಡಿ 19 ಬಾಂಡನ್ನು ಯಾರು ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ವ್ಯಕ್ತಿ ದಾಖಲೆ ಬರೆದುಕೊಡುತ್ತಾರೆ ಅವರ ಹೆಸರಿನಲ್ಲಿ ಬಾಂಡ್ ಇರುತ್ತದೆ ಎಂದು ಗೊತ್ತಿಲ್ಲ. ನಿಡಿ-19 ಬಾಂಡನ್ನು ಎಸ್. ಬಿ. ಅಂಗಡಿ ಅನ್ನುವವರು ತಂದಿರುತ್ತಾರೆ ಅಂದರೆ ಸರಿ. ನಿಡಿ-19 ಬಾಂಡಿನಲ್ಲಿ ಸಹಿ ಯಾದ ನಂತರ ಮುಂದು ಬರೆದಿರುತ್ತಾರೆ ಅಂದರೆ ಸರಿಯಲ್ಲ. ನಿಡಿ-19 ನಾನು ಸೃಷ್ಟಿ ಮಾಡಿಕೊಂಡ ದಾಖಲೆ ಅಂದರೆ ಸರಿಯಲ್ಲ. ನಿಡಿ-9 ಮೃತ್ಯು ಪತ್ರಕ್ಕೆ ಅನುಕೂಲವಾಗಲಿ ಎಂದು ನಿಡಿ-19 ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ಪ್ರಕಾರ ವಾದಿಯ ಹೆಸರು ಕಡಿಮೆಯಾಗಿತ್ತು 1989 ರಲ್ಲಿ ವಾದಿ ನಿಡಿ-19 ಬರೆದುಕೊಡುವ ಪ್ರಶ್ನೆ ಉದ್ಭವ ಆಗುವುದಿಲ್ಲ

ಎಂದರೆ ಸರಿಯಲ್ಲ. ನಾವೆಲ್ಲಾ ಅಣ್ಣತಮ್ಮಂದಿರು 10,000/- ರೂಪಾಯಿ ವಾದಿಗೆ ಕೊಟ್ಟು ನಿಡಿ-19 ಅನ್ನು ಸೃಷ್ಟಿ ಮಾಡಿದದೇವೆ ಎಂದರೆ ಸರಿಯಲ್ಲ. ನಿಡಿ-19 ನೊಂದಣಿ ಆಗದ ಕಾರಣ ವಾದಿಯ ಹಕ್ಕು ನಷ್ಟ ಉಂಟಾಗುವುದಿಲ್ಲ ಅಂದರೆ ಸರಿಯಲ್ಲ. ನಿಡಿ-19 ರಲ್ಲಿರುವ ಸಹಿ ವಾದಿದು ಅಲ್ಲ ಅಂದರೆ ಸರಿಯಲ್ಲ. ನಿಡಿ-19 ನಮಗೆ ಅನುಕೂಲ ಆಗಲು ನೋಟರಿ ಮಾಡಿಸಿರುತ್ತೇವೆ ಆದರೆ ನೋಟರಿ ನೊಂದಣಿ ಸಂಖ್ಯೆ ಇಲ್ಲ ಎಂದರೆ ಗೊತ್ತಿಲ್ಲ. ನಿಪಿ-18 ಅನ್ನು ನಾವೆಲ್ಲ ಅಣ್ಣತಮ್ಮಂದಿರು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದಕ್ಕೆ ವಾದಿಯ ಸಹಿ ಇಲ್ಲ ಅಂದರೆ ಸರಿ. ವಾದಿಗೆ ಗೊತ್ತಿಲ್ಲದ ಹಾಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಹಿಸ್ಸಾ ಕೇಳುತ್ತಾಳೆಂದು ನಿಪಿ-18 ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಸಮನಾದ ಹಕ್ಕಿದೆ ಎಂದರೆ ಸರಿಯಲ್ಲ. ವಾದಿ ಮತ್ತು ನಮ್ಮ ನಡುವೆ ಸರಿಸಮನಾದ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬಾರದೆಂದು ನಿಡಿ-9 ಮೃತ್ಯು ಪತ್ರ ಮತ್ತು ನಿಡಿ-19 ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-9 ಮತ್ತು ನಿಡಿ-19 ಕಾರ್ಯರೂಪಕ್ಕೆ ಬಂದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.